ಕರ್ನಾಟಕ ವಿಧಾನ ಪರಿಷತ್ತು

ಲಘು ಪ್ರಕಟಣೆ ಭಾಗ-2

(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)

ಶುಕ್ರವಾರ, ದಿನಾಂಕ:04ನೇ ನವೆಂಬರ್, 2022

ಸಂಖ್ಯೆ: 142

ಸರ್ಕಾರದ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳ ಇಲಾಖೆಯ ವತಿಯಿಂದ ದಿನಾಂಕ:23.10.2022 ರಂದು ಹೊರಡಿಸಿರುವ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022 (ಕರ್ನಾಟಕ ಅಧ್ಯಾದೇಶ ಸಂಖ್ಯೆ-07) ಪ್ರತಿಯನ್ನು https://erajyapatra. karnataka.gov.in/ ನಲ್ಲಿ ಅಥವಾ ವಿಧಾನ ಪರಿಷತ್ತಿನ ಅಂತರ್ಜಾಲ ತಾಣ www.kla.kar.nic.in/council/council.htmದಲ್ಲಿ ಪಡೆದುಕೊಳ್ಳಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳಿಗೆ.

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – IVA	ಬೆಂಗಳೂರು, ಭಾನುವಾರ, ವಿಜಯ, ಅಕ್ಟೋಬರ್, 23, 2022(ಕಾರ್ತಿಕ ,01, ಶಕವರ್ಷ ,1944)	ಸಂ. ವಿಶೇಷ
Part – IVA	BENGALURU, SUNDAY, 23, OCTOBER, 2022(KARTHIKA ,01, SHAKAVARSHA, 1944)	No. 536

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 29 ಶಾಸನ 2022, ಬೆಂಗಳೂರು, ದಿನಾಂಕ: 23.10.2022.

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022 ಇದಕ್ಕೆ 2022ರ ಅಕ್ಟೋಬರ್ ತಿಂಗಳ 23ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2022ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 07 ಎಂಬುದಾಗಿ ದಿನಾಂಕ 23ನೇ ಅಕ್ಟೋಬರ್ 2022ರಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

2022 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 07

ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022.

(ಭಾರತ ಗಣರಾಜ್ಯದ ಎಪ್ಪತ್ತ್ಮಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯಪಾಲರಿಂದ ಪ್ರಖ್ಯಾಪಿತವಾಗಿ 2022 ರ ಅಕ್ಟೋಬರ್ ತಿಂಗಳ 23ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ).

ಕರ್ನಾಟಕ ರಾಜ್ಯದಲ್ಲಿರುವ ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ರಾಜ್ಯದಲ್ಲಿನ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಾತಿಗೆ ಉಪಬಂಧ ಕಲ್ಪಿಸಲು ಒಂದು ಅಧ್ಯಾದೇಶ.

ಕರ್ನಾಟಕ ರಾಜ್ಯವನ್ನು ಹಿಂದಿನ ಮೈಸೂರು ರಾಜ್ಯದಿಂದ ರೂಪಿಸಲಾಗಿದ್ದು ಮತ್ತು 1948ನೇ ಸಾಲಿನಲ್ಲಿ ಮೈಸೂರು ರಾಜ್ಯವು ಭಾರತದ ರಾಷ್ಟ್ರಾಧಿಪತ್ಯವನ್ನು ಸೇರಿರುವುದರಿಂದ ಮತ್ತು ಭಾರತ ಸಂವಿಧಾನದ 341ನೇ ಅನುಚ್ಛೇದದ ಮತ್ತು 342ನೇ ಅನುಚ್ಛೇದದ ಮೇರೆಗೆ ಭಾರತದ

ರಾಷ್ಟ್ರಪತಿಯವರು ಕೆಲವು ಜಾತಿಗಳನ್ನು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳೆಂದು ಘೋಷಿಸಿರುವುದರಿಂದ.

ಇನ್ನೂ ಕೆಲವು ಸಮುದಾಯಗಳನ್ನು ಸೇರಿಸಿದ ನಂತರ ರಾಜ್ಯದಲ್ಲಿನ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಒಟ್ಟು ಜನಸಂಖ್ಯೆಯು ರಾಜ್ಯದಲ್ಲಿ ಅತಿ ತ್ವರಿತಗತಿಯಲ್ಲಿ ತೀವ್ರವಾಗಿ ಹೆಚ್ಚಿರುವುದರಿಂದ.

1976ನೇ ವರ್ಷದಲ್ಲಿ, ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಆದೇಶಗಳ (ತಿದ್ದುಪಡಿ) ಅಧಿನಿಯಮ, 1976ರ (1976ರ ಕೇಂದ್ರ ಅಧಿನಿಯಮ 108) ಅನುಸಾರ ಜಾತಿಗಳಿಗೆ ಹಾಕಲಾದ ಭೌಗೋಳಿಕ ಮಿತಿಗಳನ್ನು ತೆಗೆದುಹಾಕಿದ್ದು, ಇದೂ ಸಹ ಕರ್ನಾಟಕ ರಾಜ್ಯದಲ್ಲಿ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯ ಅಸಾಧಾರಣ ಹೆಚ್ಚಳಕ್ಕೆ ಕಾರಣವಾಗಿರುವುದರಿಂದ.

ಕರ್ನಾಟಕ ರಾಜ್ಯವು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗಾಗಿ 18% ಸಂಯೋಜಿತ ಮೀಸಲಾತಿಯನ್ನು 1955ರ ಏಪ್ರಿಲ್‌ನಲ್ಲಿ ಸರ್ಕಾರದ ಆದೇಶ E-185-285 RBS-35-34-2 ರ ಮೂಲಕ ಕಲ್ಪಿಸಿರುತ್ತದೆ.

ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಯು ಮತ್ತು ಅವು ಒಳಗೊಳ್ಳುವ ಜಾತಿಗಳ ಸಂಖ್ಯೆಯು ತರುವಾಯ ಹೆಚ್ಚಾಗಿದ್ದರೂ ಅವರಿಗೆ ಕಲ್ಪಿಸಲಾದ ಮೀಸಲಾತಿಯು 1958ನೇ ಸಾಲಿನಲ್ಲಿ ಇದ್ದಂತೆ ಅಂದರೆ ಅನುಸೂಚಿತ ಜಾತಿಗಳಿಗೆ 15% ಮತ್ತು ಅನುಸೂಚಿತ ಪಂಗಡಗಳಿಗೆ 3% ಉಳಿದುಕೊಂಡು ಬಂದಿರುವುದರಿಂದ.

ತದನಂತರ, ದತ್ತಾಂಶ ಸಂಗ್ರಹವನ್ನು ಬಾಕಿಯಿರಿಸಿ ಸರ್ಕಾರವು ಸರ್ಕಾರಿ ಆದೇಶ ಸಂ.ಜಿಎಡಿ (ಒಎಂ) 46 ಜಿಆರ್‌ಆರ್ 57, ದಿನಾಂಕ: 04.02.1958ರ ಮೂಲಕ ಅನುಸೂಚಿತ ಜಾತಿಗಳಿಗೆ 15% ಮತ್ತು ಅನುಸೂಚಿತ ಪಂಗಡಗಳಿಗೆ 3% ಮೀಸಲಾತಿಯನ್ನು ಕಲ್ಪಿಸಿ ಆದೇಶಿಸಿತ್ತು. ಅದೇ ಶೇಕಡಾವಾರು ಮೀಸಲಾತಿಯನ್ನು ಇತ್ತೀಚಿನ ಸರ್ಕಾರದ ಆದೇಶ ಸಂ: ಎಸ್‌ಡಬ್ಲೂಡಿ 225 ಬಿಸಿಎ 2000, ದಿನಾಂಕ: 30ನೇ ಮಾರ್ಚ್ 2002ರಲ್ಲಿ ಮುಂದುವರೆಸಲಾಗಿದ್ದು, ಅದು ಈ ಕೆಳಕಂಡಂತಿದೆ:

(ಎ) ಅನುಸೂಚಿತ ಜಾತಿಗಳು: 15%

(ಬಿ) ಅನುಸೂಚಿತ ಪಂಗಡಗಳು: 3%

(ಸಿ) ಹಿಂದುಳಿದ ವರ್ಗ: 32%

ಸಾಂವಿಧಾನಿಕ ಆದೇಶದ ಅನುಸಾರ ಸಾರ್ವಜನಿಕ ಉದ್ಯೋಗ ಮತ್ತು ಶೈಕ್ಷಣಿಕ ಸಂಸ್ಥೆಗಳೆರಡರಲ್ಲಿಯೂ ಸಾಕಷ್ಟು ಪ್ರಾತಿನಿಧ್ಯವಿಲ್ಲವೆಂದು ಅನುಸೂಚಿತ ಜಾತಿಗಳು ಮತ್ತು ಪಂಗಡಗಳಿಗೆ ಸೇರಿದ ಸದಸ್ಯರು ನಿರಂತರವಾಗಿ ಬೇಡಿಕೆ ಮತ್ತು ಮನವಿಯನ್ನು ಮಾಡುತ್ತಿರುವುದರಿಂದ, ಹಾಗೂ ನಾಯಕ ವಿದ್ಯಾರ್ಥಿ ಸಂಘವು ಕರ್ನಾಟಕ ಉಚ್ಚನ್ಯಾಯಾಲಯದ ಮೊರೆ ಹೋಗಿರುವುದರಿಂದ.

ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ: 16852/2015ರಲ್ಲಿ ನಾಯಕ ವಿದ್ಯಾರ್ಥಿ ಸಂಘವು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಮೀಸಲಾತಿಯನ್ನು ಹೆಚ್ಚಿಸಲು ದಾಖಲಿಸಿದ ಮನವಿಯನ್ನು ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿರುವುದರಿಂದ.

ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ಈ ಕುರಿತು ತೀರ್ಮಾನ ಕೈಗೊಳ್ಳಲು ಮತ್ತು ಪ್ರಾಯೋಗಿಕ ಜನ್ಯ (empirical) ದತ್ತಾಂಶವನ್ನು ಸಂಗ್ರಹಿಸಲು ರಾಜ್ಯ ಸರ್ಕಾರವು ಉಲ್ಲೇಖಾಧೀನ ಸಂ. ಎಸ್‌ಡಬ್ಲ್ಯೂಡಿ 303 ಪಿವಿಪ್ರೆ 2015 ದಿನಾಂಕ: 22.07.2019ರ ಮೂಲಕ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ ಇವರ ನೇತೃತ್ವದಲ್ಲಿ ಆಯೋಗವೊಂದನ್ನು ನೇಮಿಸಿತು.

ಆಯೋಗವು ಈ ಸಂಬಂಧ ವ್ಯಾಪಕ ಅಧ್ಯಯನವನ್ನು ಕೈಗೊಂಡು, ವರದಿಯನ್ನು ಸಿದ್ಧಪಡಿಸಿ ರಾಜ್ಯ ಸರ್ಕಾರಕ್ಕೆ 02.07.2020ರಂದು ಸಲ್ಲಿಸಿತು. ಸದರಿ ವರದಿಯ ಪ್ರಮುಖ ಅಂಶಗಳು ಇಂತಿವೆ,-

(ಎ) ಕನಿಷ್ಠಪ್ರಮಿತಿಯಲ್ಲಿರುವ ಮತ್ತು ಈಗಲೂ ಮುಖ್ಯವಾಹಿನಿಯಿಂದ ಹೊರಗಿರುವ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಲ್ಲಿನ ಅನೇಕ ಜಾತಿಗಳು ಮತ್ತು ಸಮುದಾಯಗಳು ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯ ಸಾಕ್ಷ್ಯವು ಕಂಡುಬಂದಿರುವುದರಿಂದ (ವಿಶೇಷವಾಗಿ ದುರ್ಬಲ ಬುಡಕಟ್ಟು ಸಮೂಹಗಳು (PVTGS), ಮಲಹೊರುವ ಜಾಡಮಾಲಿಗಳು, ಸಫಾಯಿ ಕರ್ಮಚಾರಿಗಳು, ದೇವದಾಸಿಯರು, ಅಲೆಮಾರಿಗಳು, ಅರೆ ಅಲೆಮಾರಿಗಳು ಇತ್ಯಾದಿ)

(ಬಿ) ಪಶ್ಚಿಮ ಘಟ್ಟಗಳ ಜೊತೆಜೊತೆಗೆ ಒಣಭೂಮಿ ಭಾಗಗಳಲ್ಲಿ ರಾಜ್ಯದ ಉದ್ದಗಲಕ್ಕೂ ಹರಡಿರುವ ಪ್ರದೇಶಗಳಲ್ಲಿ ವಾಸಿಸುವ ದಕ್ಕಲಿಗರು, ಧೋಲಿಬಿಲ್, ಮಲೇರು, ಸೋಲಿಗರು ಮುಂತಾದ ಕೆಲವು ಸಮೂದಾಯಗಳಲ್ಲಿ ಅಂಥ ಹಿಂದುಳಿದಿರುವಿಕೆಯು ನಿಜವಾಗಿಯೂ ಹೆಚ್ಚಾಗಿದೆ. ಈ ಸಮುದಾಯಗಳು ಮೀಸಲಾತಿಯ ಪ್ರಯೋಜನಗಳನ್ನು ಸಾಕಷ್ಟು ಪಡೆಯಲು ಸಾಧ್ಯವಾಗಿರುವುದಿಲ್ಲ.

(ಸಿ) ಅವರ ಜನಸಂಖ್ಯೆಗೆ ಹೋಲಿಸಿದಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗಾಗಿ ಇರುವ ಶೈಕ್ಷಣಿಕ ಸಂಸ್ಥೆಗಳು, ಸರ್ಕಾರಿ ಉದ್ಯೋಗದಲ್ಲಿ ಅವರ ಪ್ರಾತಿನಿಧ್ಯವು ಸಾಕಷ್ಟಿಲ್ಲದಿರುವುದಕ್ಕೆ ಸಾಕ್ಷ್ಯವಿದ್ದು, ಇದು ಹಿಂದುಳಿದಿರುವಿಕೆಯಿಂದ ಹೊರಬರಲು ಅವರ ತೀವ್ರ ಸಂಕಷ್ಟಕರ ಪ್ರಯತ್ನಗಳನ್ನು ತೋರಿರುವುದು.

(ಡಿ) ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಜನಸಂಖ್ಯೆಗೆ ಹೋಲಿಸಿದಲ್ಲಿ ಅವರ ಭೂ ಹಿಡುವಳಿಗಳು ಅಸಮಪ್ರಮಾಣದಲ್ಲಿವೆ ಮತ್ತು ತೀವ್ರವಾಗಿ ಕಡಿಮೆ ಇವೆ ಹಾಗೂ ಇದು ಅವರ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ಒತ್ತಿಹೇಳುತ್ತದೆ.

(ಇ) ಮೇಲಿನ ಅಧ್ಯಯನದ ಆಧಾರದ ಮೇಲೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಮೀಸಲಾತಿಗಳನ್ನು ಹೆಚ್ಚಿಸಲು ವಿಶೇಷ ಪ್ರಕರಣವೊಂದನ್ನು ಮಾಡಬೇಕಿದ್ದು, ವಿಸ್ತೃತ ಅಧ್ಯಯನ ಮತ್ತು ವಿಶ್ಲೇಷಣೆಯ ಆಧಾರದಲ್ಲಿ ಅಂಥ ಹೆಚ್ಚಳಕ್ಕಾಗಿ ವಿಶೇಷ ಪ್ರಕರಣವನ್ನು ಮಾಡಿದ ತರುವಾಯ ಅನುಸೂಚಿತ ಜಾತಿಗಳಿಗೆ 17% ಮತ್ತು ಅನುಸೂಚಿತ ಪಂಗಡಳಿಗೆ 7% ಮೀಸಲಾತಿಯು ಅನುಕ್ರಮವಾಗಿ ಹೆಚ್ಚಾಗಲಿದೆ.

ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿಯ ಅನುಷ್ಠಾನವನ್ನು ಅವಲೋಕಿಸಲು ಸರ್ಕಾರವು ನ್ಯಾಯಮೂರ್ತಿ ಸುಭಾಷ್ ಅಡಿ ಮತ್ತು ಇತರರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿಯನ್ನು ನೇಮಿಸಿತು ಹಾಗೂ ಈ ಸಮಿತಿಯು ನ್ಯಾಯಮೂರ್ತಿ ಸುಭಾಷ್ ಅಡಿ ಮತ್ತು ಇತರರ ಅಧ್ಯಕ್ಷತೆಯಲ್ಲಿದ್ದು, ಅದರ ವರದಿಯನ್ನು 07.10.2022ರಂದು ಸಲ್ಲಿಸಿರುವುದರಿಂದ.

ನ್ಯಾಯಮೂರ್ತಿ ಸುಭಾಷ್ ಅಡಿಯವರ ಸಮಿತಿಯೂ ಸಹ ಆಯೋಗದ ವರದಿಯಲ್ಲಿ ಹೇಳಿರುವಂತೆ ವಿಶೇಷ ಸನ್ನಿವೇಶವನ್ನು ತೆರೆದಿಟ್ಟಿತು ಹಾಗೂ ಕೇಂದ್ರ ಸರ್ಕಾರಿ ಉದ್ಯೋಗ ಮತ್ತು ರಾಜ್ಯ ಸರ್ಕಾರಿ ಉದ್ಯೋಗ ದಲ್ಲಿ ಬುಡಕಟ್ಟು ಪಂಗಡಗಳ ಮೀಸಲಾತಿಯನ್ನು ಹೋಲಿಸಿದಲ್ಲಿ, ಬುಡಕಟ್ಟು ಗಳಿಗೆ ಮೀಸಲಾತಿಯಲಿ ಸಮಾನತೆಯ ಕೊರತೆಯನ್ನು ಗುರುತಿಸಿರುವುದರಿಂದ,

ವರದಿಯು ಭಾರತ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ಬೆಂಗಳೂರು (ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ) ಅದರ ಅಧ್ಯಯನದಲಿ ಹೇಳೀರುವ 74% ಬುಡಕಟ್ಟು ಸಮೂದಾಯಗಳು ಅಗೋಚರವಾಗಿರುವ ಮತ್ತು ಅವರ ಸಾಕ್ಷರತಾ ಪ್ರಮಾಣವು 3% ಗಿಂತ ಕಡಿಮ ಇರುವುದನ್ನೂ ಸಹ ಉಲ್ಲೇಖಿಸಿರುವುದರಿಂದ.

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಲಡಿಯಲ್ಲಿ ಸೇರಿರುವ ಜಾತಿಗಳ ಸಂಖ್ಯೆಯನ್ನು ಇತರ ರಾಜ್ಯಗಳೊಂದಿಗೆ ಹೋಲಿಸಿದಲ್ಲಿ, ಆಗ ಇತರ ರಾಜ್ಯಗಳು ಕಡಿಮೆ ಸಂಖ್ಯೆಯ ಜಾತಿಗಳನ್ನು ಅಧಿಸೂಚಿಸಿದ್ದರೂ, ಅವರ ಶೇಕಡಾವಾರು ಮೀಸಲಾತಿಯು ಕರ್ನಾಟಕ ರಾಜ್ಯಕ್ಕಿಂತ ಹೆಚ್ಚಾಗಿ ಕಂಡುಬರುವುದನ್ನೂ ಸಹ ವರದಿಯು ಹೇಳಿರುವುದರಿಂದ ವರದಿಯು ಮಧ್ಯಪ್ರದೇಶ, ರಾಜಸ್ತಾನ ಮತ್ತು ಉತ್ತರ ಪ್ರದೇಶದ ಉದಾಹರಣೆಯನ್ನು ಸೇರಿಸಿದೆ.

ವರದಿಯು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಪೈಕಿ ಅತ್ಯಂತ ವಂಚಿತ ವರ್ಗಗಳಿಗೆ ಮೀಸಲಾತಿಯ ಅಗತ್ಯವನ್ನು ದಾಖಲಿಸಿದೆ. ಕರ್ನಾಟಕದಲ್ಲಿ ತಮ್ಮನ್ನು ಗುರುತಿಸಿಕೊಳ್ಳಲು ಮತ್ತು ಸಂಘಟಿತರಾಗಲು ಕಷ್ಟಕರವಾಗಿರುವ ಅಂಥ ಜನಸಂಖ್ಯೆಯ ಭಾಗವು 74% ರಷ್ಟಿದೆ.

ಯಾವುದೇ ಅಸಮಾನತೆಯನ್ನು ಕಡಿಮೆಗೊಳಿಸಲು ರಾಜ್ಯದ ಅಧಿಕಾರವ್ಯಾಪ್ತಿ ಒಳಗಿರುವ ಧನಾತ್ಮಕ ಕ್ರಮಗಳ ಅಗತ್ಯವನ್ನೂ ಸಹ ವರದಿಯು ದಾಖಲಿಸಿದೆ.

ಮುಂದುವರೆದು, ಸಾಮಾಜಿಕ ನ್ಯಾಯ ಮತ್ತು ಸಕಾರಾತ್ಮಕ ಕ್ರಮವು ಆಡಳಿತದ ಮೈಲಿಗಲ್ಲನ್ನು ರೂಪಿಸುವುದೆಂದು ಹಾಗೂ ರಾಜ್ಯವು ಸಮಸಮಾಜವನ್ನು ತರುವ ಕಾರ್ಯದಲ್ಲಿ ಬದ್ಧವಾಗಿರಬೇಕೆಂದು ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಹಿಂದುಳಿದಿರುವ ಪ್ರವರ್ಗಗಳ ಸದಸ್ಯರನ್ನು ಸಮಾಜದ ಮುಖ್ಯವಾಹಿನಿಯ ಭಾಗವಾಗಿಸಲು ಸತತ ಪ್ರಯತ್ನಗಳನ್ನು ಮಾಡಬೇಕೆಂದು ವರದಿಯು ಹೇಳಿದೆ.

ಇಂದಿನ ಸಮಾಜವು ಒಪ್ಪಿಕೊಂಡಂತೆ ಸಾರ್ವಜನಿಕ ಸೇವೆಯ ಭಾಗವಾಗಿರುವುದು, ಸಾಮಾಜಿಕ ಸ್ವಾಸ್ಥಮಾನವನ್ನು ತಲುಪಲು ಹಾಗೂ ಆಡಳಿತ ನಿರ್ವಹಣೆಯಲ್ಲಿ ಪಾತ್ರವನ್ನು ವಹಿಸಲು ಸಕಾರಾತ್ಮಕ ಕ್ರಮದ ಮೂಲಕ ರಾಜ್ಯದ ಅಧಿಕಾರ ಹಂಚಿಕೆಯನ್ನು ಸಾಧ್ಯವಾಗಿಸಲು ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಹಿಂದುಳಿದಿರುವ ಪ್ರವರ್ಗಗಳನ್ನೂ ಸಹ ಮುಖ್ಯವಾಹಿನಿಗೆ ತರುವುದು ಸಂವಿಧಾನದ ಅನುಚ್ಛೇದ 16 (4)ರ ಉದ್ದೇಶವಾಗಿರುವುದರಿಂದ.

ಮೇಲಿನದನ್ನು ಪರಿಗಣಿಸಿದ ನಂತರ ಸರ್ಕಾರವು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ಸದಸ್ಯರಿಗಾಗಿ ಮೀಸಲಾತಿಗಳನ್ನು ಹೆಚ್ಚಿಸಲು ಅಸಾಧಾರಣ ಸನ್ನಿವೇಶಗಳು ಮತ್ತು ವಿಶೇಷ ಪ್ರಕರಣವು ಈಡೇರಬೇಕಾಗಿರುವುದರಿಂದ.

ಸಂವಿಧಾನದ 15ನೇ ಅನುಚ್ಛೇದದ (4)ನೇ ಖಂಡವು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಯಾವುವೇ ನಾಗರೀಕರ ವರ್ಗಗಳ ಏಳಿಗೆಗಾಗಿ ಯಾವುದೇ ವಿಶೇಷ ಉಪಬಂಧಗಳನ್ನು ಕಲ್ಪಿಸಲು ರಾಜ್ಯವನ್ನು ಸಮರ್ಥಗೊಳಿಸಿರುವುದರಿಂದ;

ಸಂವಿಧಾನದ 16ನೇ ಅನುಚ್ಛೇದದ (4) ನೇ ಖಂಡವು, ರಾಜ್ಯಾಧೀನ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯವನ್ನು ಹೊಂದಿಲ್ಲವೆಂದು ರಾಜ್ಯವು ಅಭಿಪ್ರಾಯಪಡುವಂಥ ಹಿಂದುಳಿದ ಯಾವುದೇ ನಾಗರಿಕರ ವರ್ಗಗಳ ಪರವಾಗಿ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿಗಾಗಿ ಯಾವುದೇ ಉಪಬಂಧ ಕಲ್ಪಿಸಲು ರಾಜ್ಯವನ್ನು ಸಮರ್ಥಗೊಳಿಸಿರುವುದರಿಂದ;

ಸಂವಿಧಾನದ 38ನೇ ಅನುಚ್ಛೇದದ (1) ನೇ ಖಂಡದ ಅಡಿಯಲ್ಲಿ, ನ್ಯಾಯಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ರಾಷ್ಟ್ರೀಯ ಜೀವನದ ಎಲ್ಲ ಕ್ಷೇತ್ರಗಳನ್ನು ಒಳಗೊಳ್ಳುವಂಥ ಒಂದು ಸಾಮಾಜಿಕ ವ್ಯವಸ್ಥೆಯನ್ನು ಹೊಂದುವ ಮತ್ತು ಅದನ್ನು ಪರಿಣಾಮಕಾರಿಯಾಗಿ ಸಂರಕ್ಷಿಸುವ ಮೂಲಕ ಜನತೆಯ ಕಲ್ಯಾಣವನ್ನು ಉತ್ತೇಜಿಸಲು ರಾಜ್ಯವು ಯತ್ನಿಸಬೇಕಾಗಿರುವುದರಿಂದ;

ಶೇಕಡಾ 50ರ ಪರಿಮಿತಿಯನ್ನು ಮೀರಿ ಇತರ ಹಲವು ರಾಜ್ಯಗಳು ಕಾಲಕಾಲಕ್ಕೆ ಮೀಸಲಾತಿ ಕೋಟಾವನ್ನು ಹೆಚ್ಚಿಸಿರುವುದರಿಂದ;

ಕರ್ನಾಟಕ ವಿಧಾನಸಭೆ ಮತ್ತು ಕರ್ನಾಟಕ ವಿಧಾನ ಪರಿಷತ್ತು ಅಧಿವೇಶನದಲ್ಲಿ ಇಲ್ಲದಿರುವುದರಿಂದ ಮತ್ತು ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಅಧ್ಯಾದೇಶವನ್ನು ಪ್ರಖ್ಯಾಪಿಸುವುದಕ್ಕೆ ಶೀಘ್ರ ಕ್ರಮವನ್ನು ತೆಗೆದುಕೊಳ್ಳಲು ಅವಶ್ಯಗೊಳಿಸುವಂಥ ವಿದ್ಯಮಾನಗಳು ಉಂಟಾಗಿವೆಯೆಂದು ಕರ್ನಾಟಕದ ರಾಜ್ಯಪಾಲರಿಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ, ಈಗ ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕದ ರಾಜ್ಯಪಾಲರು ಈ ಮುಂದಿನ ಅಧ್ಯಾದೇಶವನ್ನು ಪ್ರಖ್ಯಾಪಿಸಿರುತ್ತಾರೆ:

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧ್ಯಾದೇಶವನ್ನು ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022 ಎಂದು ಕರೆಯತಕ್ಕದ್ದು.

(2) ಇದು ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಅಧ್ಯಾದೇಶದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. ಪರಿಭಾಷೆಗಳು.- (1) ಈ ಅಧ್ಯಾದೇಶದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅನುಸೂಚಿತ ಜಾತಿಗಳು"** ಭಾರತ ಸಂವಿಧಾನದ 341ನೇ ಅನುಚ್ಛೇದದಡಿ ಮಾಡಲಾದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಲಾದ ಅನುಸೂಚಿತ ಜಾತಿಗಳು ಎಂಬ ಉಲ್ಲೇಖವನ್ನು ಹೊಂದಿರತಕ್ಕದ್ದು.

(ಬಿ) **"ಅನುಸೂಚಿತ ಪಂಗಡಗಳು"** ಭಾರತ ಸಂವಿಧಾನದ 342ನೇ ಅನುಚ್ಛೇದದಡಿ ಮಾಡಲಾದ ಮತ್ತು ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಸಂವಿಧಾನ (ಅನುಸೂಚಿತ ಪಂಗಡಗಳು)

ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಲಾದ ಅನುಸೂಚಿತ ಪಂಗಡಗಳು ಎಂಬ ಉಲ್ಲೇಖವನ್ನು ಹೊಂದಿರತಕ್ಕದ್ದು.

(ಸಿ) ``**ಸರ್ಕಾರ**'' ಎಂದರೆ ಕರ್ನಾಟಕ ಸರ್ಕಾರ;

(ಡಿ) ``**ಶೈಕ್ಷಣಿಕ ಸಂಸ್ಥೆಗಳು**'' ಎಂದರೆ, ರಾಜ್ಯ ಸರ್ಕಾರದಿಂದ ನಿರ್ವಹಿಸಲಾಗುತ್ತಿರುವ ಅಥವಾ ರಾಜ್ಯ ನಿಧಿಗಳಿಂದ ಅನುದಾನ ಪಡೆಯುತ್ತಿರುವ ಯಾವುದೇ ಶಾಲೆ, ಕಾಲೇಜು ಅಥವಾ ಇತರ ಶೈಕ್ಷಣಿಕ ಸಂಸ್ಥೆ;

(ಇ) "**ಸೇವೆ ಅಥವಾ ಹುದ್ದೆ**" ಎಂದರೆ, ಕರ್ನಾಟಕ ರಾಜ್ಯದ ಸಿವಿಲ್ ಸೇವೆ ಅಥವಾ ಕರ್ನಾಟಕ ರಾಜ್ಯದಡಿಯಲ್ಲಿನ ಸಿವಿಲ್ ಹುದ್ದೆ, ಮತ್ತು ಸಾರ್ವಜನಿಕ ವಲಯದಲ್ಲಿನ ಸಂಸ್ಥೆಯಲ್ಲಿರುವ ಸೇವೆ ಅಥವಾ ಹುದ್ದೆಯನ್ನು ಒಳಗೊಳ್ಳುವುದು.

(ಎಫ್) "**ಸಾರ್ವಜನಿಕ ವಲಯದಲ್ಲಿನ ಸಂಸ್ಥೆ**" ಎಂದರೆ,-

(i) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ 11) ಅಡಿಯಲ್ಲಿ ನೋಂದಣಿಯಾದ ಅಥವಾ ನೋಂದಣಿಯಾಗಿದೆ ಎಂದು ಭಾವಿಸಲಾದ ಸಹಕಾರ ಸಂಘ;

(ii) ರಾಜ್ಯ ಸರ್ಕಾರದ ಮೂಲಕ ಸ್ಥಾಪಿಸಲಾದ ಅಥವಾ ನಿರ್ವಹಿಸಲಾದ ಅಥವಾ ಅನುದಾನಿತವಾದ ಶೈಕ್ಷಣಿಕ ಸಂಸ್ಥೆಗಳು;

(iii) ಕಂಪನಿಗಳ ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 01)ರ 617ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿರುವ ಒಂದು ಸರ್ಕಾರಿ ಕಂಪನಿ;

(iv) ಸ್ಥಳೀಯ ಪ್ರಾಧಿಕಾರ; ಮತ್ತು

(v) ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ಸ್ಥಾಪಿಸಿದ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಶಾಸನಬದ್ಧ ನಿಕಾಯ;

(2) ಈ ಅಧ್ಯಾದೇಶದಲ್ಲಿ ಪರಿಭಾಷಿಸದೇ ಇರುವ ಆದರೆ ಉಪಯೋಗಿಸಿದ ಎಲ್ಲ ಇತರ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ 03)ರಲ್ಲಿ ಅವುಗಳಿಗೆ ನಿಗದಿಪಡಿಸಿದ ಆದೇ ಅರ್ಥವನ್ನು ಹೊಂದಿರತಕ್ಕದ್ದು.

3. ಸ್ಥಾನಗಳಲ್ಲಿ ಮೀಸಲಾತಿ.- ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಮನದಲ್ಲಿರಿಸಿಕೊಂಡು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ರಾಜ್ಯದಲ್ಲಿರುವ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶಾವಕಾಶಕ್ಕಾಗಿ ಪ್ರತಿಯೊಂದು ಶಾಖೆ ಅಥವಾ ವ್ಯಾಸಂಗ ವಿಭಾಗಕ್ಕೆ ಸಂಬಂಧಿಸಿದ ಮೀಸಲಾತಿಯು ಅನುಕ್ರಮವಾಗಿ ಶೇಕಡಾ ಹದಿನೇಳರಷ್ಟು ಮತ್ತು ಶೇಕಡ ಏಳರಷ್ಟಿರತಕ್ಕದ್ದು.

4. ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿಗಳು ಅಥವಾ ಹುದ್ದೆಗಳಲ್ಲಿನ ಮೀಸಲಾತಿ.- ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವುದನ್ನು ಗಮನದಲ್ಲಿರಿಸಿಕೊಂಡು

ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕಿಗಳಿಗಾಗಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡಾ ಹದಿನೈದರಿಂದ ಶೇಕಡ ಹದಿನೇಳರಷ್ಟಕ್ಕೆ ಹಾಗೂ ಶೇಕಡಾ ಮೂರರಿಂದ ಶೇಕಡ ಏಳರಷ್ಟಕ್ಕೆ ಅನುಕ್ರಮವಾಗಿ ಹೆಚ್ಚಿಸತಕ್ಕದ್ದು.

ವಿವರಣೆ:- ಈ ಅಧ್ಯಾದೇಶದ ಉದ್ದೇಶಗಳಿಗಾಗಿ "ರಾಜ್ಯಾಧೀನ ಸೇವೆಗಳು" ಎಂಬುದು ಈ ಮುಂದಿನ ಸೇವೆಗಳನ್ನು ಒಳಗೊಳ್ಳುತ್ತದೆ:-

(i) ಸರ್ಕಾರ;

(ii) ರಾಜ್ಯ ವಿಧಾನಮಂಡಲ;

(iii) ಯಾವುದೇ ಸ್ಥಳೀಯ ಪ್ರಾಧಿಕಾರ; ಅಥವಾ

(iv) ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮ ಅಥವಾ ಕಂಪನಿ;

5. ಮೀಸಲಾತಿಗೆ ಬಾಧಕ ಉಂಟಾಗತಕ್ಕದ್ದಲ್ಲ.- 3 ಮತ್ತು 4 ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಕ್ಷೇಮುಗಳನ್ನು ಅರ್ಹತೆಯ ಆಧಾರದ ಮೇಲೆ ಭರ್ತಿ ಮಾಡತಕ್ಕಂಥ ಮೀಸಲಿರಿಸದಿರುವ ಸ್ಥಾನಗಳು, ನೇಮಕಾತಿಗಳು ಅಥವಾ ಹುದ್ದೆಗಳಿಗೆ ಪರಿಗಣಿಸತಕ್ಕದ್ದು ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಯು ಅರ್ಹತೆಯ ಆಧಾರದ ಮೇಲೆ ಆಯ್ಕೆಯಾದಲ್ಲಿ, ಸಂದರ್ಭಾನುಸಾರವಾಗಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಅಥವಾ ಸ್ಥಾನಗಳಲ್ಲಿನ ನೇಮಕಾತಿಯಲ್ಲಿ, ಅಥವಾ ಆ ಹುದ್ದೆಗಳಿಗೆ ಮೀಸಲಿರಿಸಿದ ಸಂಖ್ಯೆಗೆ ಯಾವುದೇ ರೀತಿಯಲ್ಲಿ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

6. ನಿಯಮಗಳನ್ನು ರಚಿಸಲು ಅಧಿಕಾರ.- (1) ಸರ್ಕಾರವು ಈ ಅಧ್ಯಾದೇಶದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಗಳಿಗಾಗಿ ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ಈ ಅಧ್ಯಾದೇಶದ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅನುಕ್ರಮ ಅಧಿವೇಶನಗಳಲ್ಲಿ ಒಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು, ಮತ್ತು ಹೀಗೆ ಮಂಡಿಸಲಾದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ಮಾಡಬಾರದೆಂದು ತೀರ್ಮಾನಿಸಿದರೆ ತದನಂತರ ಆ ನಿಯಮವು, ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಲಾದ ಯಾವುದರ ಮಾನ್ಯತೆಗೂ ಪ್ರತಿಕೂಲವಾಗದಂತೆ ಅಂಥ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ.

7. ತೊಂದರೆಗಳನ್ನು ನಿವಾರಿಸಲು ಅಧಿಕಾರ.- (1) ಈ ಅಧ್ಯಾದೇಶದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು, ಆದೇಶದ ಮೂಲಕ ಈ

ಅಧ್ಯಾದೇಶದ ಉಪಬಂಧಗಳಿಗೆ ಅಸಂಗತವಾಗದಂತೆ, ಅಗತ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವ ಉಪಬಂಧಗಳನ್ನು ಮಾಡಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಈ ಅಧ್ಯಾದೇಶವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಅವಧಿ ಮುಕ್ತಾಯವಾದ ತರುವಾಯ ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

ಥಾವರ್‌ಚಂದ್ ಗೆಹ್ಲೋಟ್
ಕರ್ನಾಟಕ ರಾಜ್ಯಪಾಲರು

ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಜಿ. ಶ್ರೀಧರ್
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಇಲಾಖೆ

PARLIAMENTARY AFFAIRS AND LEGISLATION SECRETARIAT

NOTIFICATION

NO: DPAL 29 SHASANA 2022, BENGALURU, DATED: 23.10.2022

Ordered that the translation of **ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ**, 2022 (2022 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 07) in English language, be published as authorised by the Governor of Karnataka under clause (3) of Article 348 of the Constitution of India in the Karnataka Gazette for general information.

The following translation of **ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ**, 2022 (2022 ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 07) in English language is published in the Official Gazette as authorised by the Governor of Karnataka under clause (3) of Article 348 of the Constitution of India,-

KARNATAKA ORDINANCE NO. 07 OF 2022

THE KARNATAKA SCHEDULED CASTES AND SCHEDULED TRIBES (RESERVATION OF SEATS IN EDUCATIONAL INSTITUTIONS AND OF APPOINTMENTS OR POSTS IN THE SERVICES UNDER THE STATE) ORDINANCE, 2022

(Promulgated by the Governor of Karnataka in the Seventy third year of the Republic of India and First published in the Karnataka Gazette Extra-ordinary on the 23rd day of October, 2022)

An Ordinance to provide for reservation of seats in educational institutions in the State of Karnataka and of appointments or posts in the services under the State for the persons belonging to the Scheduled Castes and the Scheduled Tribes in the State.

Whereas, the State of Karnataka was formed from the erstwhile Mysore State and the Mysore State joined the Indian Dominion in the year 1948 and where as the President of India issued an order under Article 341 and Article 342 of the Constitution of India declaring certain castes to be the Scheduled Castes and Scheduled Tribes.

Whereas, the number of castes increased drastically after the inclusion of some more communities, total population of the Scheduled Castes and Scheduled Tribes in the State went up by leaps and bound.

Whereas, in the year 1976 as per the Scheduled Castes and Scheduled Tribes Orders (Amendment) Act, 1976 (Central Act 108 of 1976) the geographical limitations attached to the castes were removed which also led to extraordinary increase in the population of the Scheduled Castes and the Scheduled Tribes in the State of Karnataka.

Whereas, the State of Karnataka had provided reservation vide Government Order E- 185-285 RBS-35-34-2 during April 1955, a combined reservation of 18% for the Scheduled Castes and Scheduled Tribes.

Whereas, the reservation quota provided to the Scheduled Castes and Scheduled Tribes continued to remain the same as it was in the year 1958, i.e., 15% for the Scheduled Castes and 3% for the Scheduled Tribes, though their population and coverage of number of castes increased subsequently.

Thereafter, the Government vide G.O.No..GAD (OM) 46 GRR 57, dated 04.02.1958 pending collection of data tentatively arrived at

reservation for the Scheduled Castes at 15% and the Scheduled Tribes at 3%. The same percentage of reservation has continued in the latest Government Order No.SWD 225 BCA 2000, dated 30th March 2002 as under:

(a) Scheduled Castes: 15%
(b) Scheduled Tribes: 3%
(c) Backward Class: 32%

Whereas, there has been a continuous demand and request by the members belonging to the Scheduled Castes and the Scheduled Tribes for increase in the reservation percentage, both in public employment and in educational institutions, as there was no adequate representation as per the constitutional mandate, and the Nayaka student's association approached the High Court of Karnataka.

Whereas, the High Court of Karnataka in W.P.No.16852/2015 directed the State Government to consider the representation filed by Nayak Students' Welfare Federation for increase of reservation to the Scheduled Castes and the Scheduled Tribes.

In order to take a decision in this regard as directed by the Hon'ble High Court and to procure empirical data, the State Government appointed a Commission headed by Mr. Justice H.N. Nagamohandas, former Judge, High Court of Karnataka by way of a Reference Order No.SWD 303 PVY 2015, dated 22.07.2019.

Whereas, the Commission has undertaken an extensive study of the reference so made and submitted a report to the State Government on 02.07.2020. The salient features of the report include,-

(a) evidence of social and educational backwardness that renders many of the castes and communities under the Scheduled Castes and the Scheduled Tribes marginalized and still outside the mainstream (the Particularly Vulnerable Tribal Groups (PVTGs), Manual scavengers, Safai Karmacharis, Devadasis, Nomads, semi-nomads etc)

(b) such backwardness is much starker in few communities who are living in the far-flung areas in the Western Ghats in addition to the dry regions of the state like Dakkligaru, Dholi Bhil, Maleru, soligaru etc. These communities have not been able to get the benefit of reservation adequately.

(c) when compared with their population, there is evidence of inadequate representation in educational institutions, employment in the Government, for the Scheduled Castes and the

Scheduled Tribes, which renders their attempt to come out of the backwardness extremely difficult.

(d) the landholdings of the Scheduled Castes and the Scheduled Tribes is disproportionate and starkly less compared to their population and that reinforces the social and educational backwardness.

(e) based on the above study, a special case is made out for increasing the reservations for the Scheduled Castes up-to 17% and 7% for the Scheduled Tribes, after making a special case for such increase based on detailed study and analysis.

Whereas, the Government appointed another Committee chaired by Justice Subhash Adi and others, to look into the implementation of the Justice Nagamohandas Commission report and this Committee chaired by Justice Subhash Adi and others, gave its report on07.10.2022.

Whereas, the Justice Subhash Adi committee also placed special circumstance as mentioned in the commission report and also pointed out the lack of parity in reservations for the Tribals compared to the reservations for the same in the Central Government employment and State Government employment.

Whereas, the report also cites a study by National Law School of India University, Bengaluru, which states 74% of the Tribal community have remained invisible and their literacy rates are lower than 3%.

The report also, mentioned that if there is a comparison made in the number of castes included under the Scheduled Castes and Scheduled Tribes with other States, then it can be seen that though other States have notified a smaller number of Castes their percentage of reservation is higher than the Karnataka State. The report includes examples of Madhya Pradesh, Rajasthan and Uttar Pradesh.

The report records about the need for reservations to the most deprived classes from amongst the Scheduled Castes and the Scheduled Tribes. In Karnataka 74% forms such part of population which makes it difficult for them to be identified and organized.

The report also records the need for positive measures, to reduce any equality, which is within the State's power.

The report further mentions that, Social justice and affirmative action form the cornerstone of Governance and the State is bound to work to bring about an egalitarian society and the endeavor constantly is that members from the Backward Classes of the Scheduled Castes and the Scheduled Tribes should be a part of the mainstream society.

Whereas, to be part of public service as accepted by the society of today, is to attain social status and play a role in Governance. The objective of Article 16 (4) of the Constitution is that the backward classes of the Scheduled Castes and the Scheduled Tribes should also be put in the mainstream to enable the sharing of power of the State by affirmative action.

Whereas, after considering the above the Government is satisfied about the extraordinary circumstances and a special case for an increase in reservations for members belonging to Scheduled Castes and Scheduled Tribes.

Whereas, clause (4) of Article 15 of the Constitution enables the State to make any special provisions for the advancement of any socially and educationally Backward Classes of citizens.

Whereas, clause (4) of Article 16 of the Constitution enables the State to make any provision for the reservation of appointments or posts in favour of any Backward Classes of citizens which in the opinion of the State is not adequately represented in the services under the State.

Whereas, clause (1) of Article 38 of the Constitution, the State shall strive to promote the welfare of the people by securing and protecting as effectively as it may, a social order in which justice, social, economic and political, shall inform all the institutions of the national life.

Whereas, there are many other states who have increased the reservation quota from time to time, exceeding the limit of fifty percent.

Whereas, the Karnataka Legislative Assembly and the Karnataka Legislative Council are not in session and the Governor of Karnataka is satisfied that the circumstances exist which render it necessary to take immediate action to promulgate an Ordinance for the purposes hereinafter appearing.

Now, therefore, in exercise of the powers conferred by clause (1) of Article 213 of the Constitution of India, the Governor of Karnataka is pleased to promulgate the following Ordinance, namely:-

1. Short title and commencement.- (1) This Ordinance may be called the Karnataka Scheduled Castes and Scheduled Tribes (Reservation of seats in Educational Institutions and of Appointments or posts in the services under the State)Ordinance,2022.

(2) It shall come into force on such date as the Government may, by notification appoint and different dates may be appointed for different provisions of the Ordinance.

2. Definitions.- (1) In this Ordinance, unless the context otherwise requires,-

(a) **"Scheduled Castes"** shall have reference to the Scheduled Castes specified in the Constitution (Scheduled castes) Order,1950 made under Article 341 of the Constitution of India and as amended from time to time;

(b) **"Scheduled Tribes"** shall have reference to the Scheduled tribes specified in the Constitution (Scheduled tribes) Order, 1950 made under Article 342 of the Constitution of India and as amended from time to time;

(c) "**Government**" means the Government of Karnataka;

(d) "**Educational Institutions**" means any school, college or other educational institution maintained by the State or receiving aid out of the State funds;

(e) **"Service or Post"** means a civil service of the State of Karnataka or a civil post under the State of Karnataka, and includes a service or post in these establishment in the Public Sector;

(f) **"Establishment in Public Sector"** means, -

(i) a Co-operative society registered or deemed to have been registered under the Karnataka Co-operative Societies Act, 1959 (Karnataka Act 11 of 1959);

(ii) an educational institution established or maintained or aided by the State Government;

(iii) a Government company within the meaning of section 617 of the Companies Act, 1956 (Central Act 01 of 1956);

(iv) a local authority ;and

(v) a statutory body or corporation established by or under a State Act owned or controlled by the State Government.

(2) All other words and expressions used but not defined in this Ordinance shall have the same meaning as assigned to them in the Karnataka General Clauses Act, 1899 (Karnataka Act 03 of 1899).

3. Reservation of seats.- Having regard to the social and educational backwardness of the persons belonging to Scheduled Castes and Scheduled Tribes the reservation in respect of each branch or faculty for admission into educational institutions in the State for the persons belonging to the Scheduled Castes and the Scheduled Tribes, shall be seventeen percent and seven percent respectively.

4. Reservation in appointments or posts in the services under the State.- Having regard to the social and educational backwardness of the persons belonging to Scheduled Castes and Scheduled Tribes, the reservation for appointments or posts in the services under the State for the persons belonging to the Scheduled Castes shall be increased from fifteen percent to seventeen percent and the Scheduled Tribes shall be increased from three percent to Seven percent, respectively.

Explanation: - For the purposes of this Ordinance, "Services under the State" includes the services under,

(i) the Government;

(ii) the Legislature of the State;

(iii) any local authority; or

(iv) any corporation or company owned or controlled by the Government.

5. Reservations not to be affected.- Notwithstanding anything contained in sections 3 and 4, the claims of the persons belonging to the Scheduled Castes or Scheduled Tribes shall also be considered for the unreserved seats, appointments or posts which shall be filled on the basis of merit and where a person belonging to the Scheduled Castes or Scheduled Tribes is selected on the basis of merit, the number of seats, appointments or posts reserved for the Scheduled Castes and Scheduled Tribes as the case may be, shall not in any way be affected.

6. Power to make rules.- (1) The Government may by notification in the Official Gazette can make rules for carrying out the provisions of this Ordinance.

(2) Every rule made under this Ordinance shall be laid before each House of the State Legislature while it is in session for a total period of thirty days which may be comprised in one session or in two or more successive sessions, and if, before the expiry of the session immediately following the session or the successive sessions aforesaid, both Houses agree in

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

making any modification in the rule or both Houses agree that the rule should not be made, the rule shall thereafter have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under that rule.

7. Power to remove difficulties.- (1) If any difficulty arises in giving effect to the provisions of this Ordinance, the Government may by order, make provisions not inconsistent with the provisions of this Ordinance as or it be necessary or expedient for removing the difficulty:

Provided that, no such order shall be made after the expiry of a period of two years from the date of commencement of this Ordinance.

(2) Every order made under this section shall as soon as may, after it is made, be laid before each House of the State Legislature.

The above translation of **ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ, 2022** (2022ರ ಕರ್ನಾಟಕ ಅಧ್ಯಾದೇಶ ಸಂಖ್ಯೆ: 07) be published in the Official Gazette under clause (3) of Article 348 of the Constitution of India.

THAAWARCHAND GEHLOT
GOVERNOR OF KARNATAKA

By Order and in the name of the
Governor of Karnataka,

G. SRIDHAR
Secretary to Government,
Department of Parliamentary Affairs
and Legislation.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೆಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE